**Code No. 18 Y**

ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರೌಢ ದರ್ಜೆ — ದ್ವಿತೀಯ ಪತ್ರಿಕೆ

## ವಿಸ್ತರಿಸುವಿಕೆ

ಜನವರಿ, 2014

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಣೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುವವರಿಗೆ ಸೂಚನೆಗಳು :***

1) ಕೆಳಗಿನ ವಿಷಯಗಳನ್ನು ಒಂದು ನಿಮಿಷಕ್ಕೆ 260 ಅಕ್ಷರಗಳ ವೇಗದಲ್ಲಿ ಶೀಘ್ರಲಿಪಿ ಶೈಲಿಯಲ್ಲಿ ಸೂಚಿಸಿರುವಂತೆ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ವಿದ್ಯಾರ್ಥಿಗಳು ಒಂದು ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನೆ ಸೂಚಕ ಸಂಖ್ಯೆಗಳು ವೇಗ ವಿಷಯದ ಭಾಗವಾಗಿದ್ದು, ಅವುಗಳನ್ನು ಹಾಗೂ ಪ್ರಶ್ನೆ ನಮೂನೆಯನ್ನು ಎತ್ತರದ ಧ್ವನಿಯಲ್ಲಿ ಓದಬೇಕು.
4) ಪ್ರತಿ ಪ್ರಶ್ನೆಗೂ ನಿಗದಿತ ಅಂಕಗಳನ್ನು ಉಕ್ತಲೇಖನದ ನಂತರ ವಿದ್ಯಾರ್ಥಿಗಳಿಗೆ ತಿಳಿಸಬೇಕು.

---

***ಪ್ರಶ್ನೆ ಒಂದು:*** ಶಿವಮೊಗ್ಗ ಲೋಕಸಭಾ ಚುನಾವಣೆ
ಜನವರಿ ಆರು ಪಕ್ಷ : ಭಾರತೀಯ ಜನತಾ ಪಕ್ಷ
ಅಭ್ಯರ್ಥಿ : ಶ್ರೀ ಬಿ.ವೈ. ರಾಘವೇಂದ್ರ ಸಮಯ : ಬೆಳಿಗ್ಗೆ
ಏಳರಿಂದ ಸಂಜೆ ಐದು. ಕಳೆದ ಸಾಲಿನಲ್ಲಿ
1/4 ಲೋ/ಕಸಭಾ ಸದಸ್ಯನಾಗಿದ್ದಾಗ ಕ್ಷೇತ್ರದಲ್ಲಿ
ಕುಡಿಯುವ ನೀರು, ವಿದ್ಯುಚ್ಛಕ್ತಿ, ರಸ್ತೆ ಸೌಲಭ್ಯ
ಒದಗಿಸಲು ಪ್ರಮುಖ ಪಾತ್ರ. ಕ್ಷೇತ್ರದಲ್ಲಿ
ರೋಗಗ್ರಸ್ಥವಾಗಿ ಮುಚ್ಚಲ್ಪಟ್ಟ ಕಾರ್ಖಾನೆಗಳ
1/2 ಪುನಾರಾರಂಭಕ್ಕೆ ಭ/ಗೀರಥ ಪ್ರಯತ್ನ ಭದ್ರಾ
ನೀರಿನ ಸಮಸ್ಯೆ ಬಗ್ಗೆ ಹೋರಾಟ, ತುಂಗಾ
ಮೇಲ್ದಂಡೆ ಯೋಜನೆಯ ಕಾರ್ಯಗತಕ್ಕೆ ನೀಡಿದ
ಶ್ರಮ, ಹಿಂದಿನ ಸಾಲಿನಲ್ಲಿ ಪೂರ್ಣಗೊಳ್ಳದೇ
ನಿಂತಿರುವ ಇನ್ನೂ ಕ್ಷೇತ್ರದ ಅನೇಕ ಜ್ವಲಂತ/ 3/4
ಸಮಸ್ಯೆಗಳನ್ನು ನಿವಾರಿಸಲು ನನ್ನನ್ನು ಪುನಃ ಆರಿಸಿ
ಮತದಾರರ ಸೇವೆ ಮಾಡಲು ಅವಕಾಶ
ಕಲ್ಪಿಸಬೇಕೆಂಬ ಆಶಯ.

**ಚುನಾವಣಾ ಪ್ರಣಾಳಿಕೆಯನ್ನು ತಯಾರಿಸಿ.**

( ಅಂಕಗಳು : 20 )

***ಪ್ರಶ್ನೆ ಎರಡು :*** ಆಶಕ್ತ ಪೋXಷಕ ಸಂಘ, 1
ದಾವಣಗೆರೆ ಇದರ ಮೂರನೇ ವಾರ್ಷಿಕ ಸಭೆ
ಸಂಘದ ಅಧ್ಯಕ್ಷರಾದ ಕೆ.ಜಿ. ಕಲ್ಲಪ್ಪನವರ

[ Turn over

ಅಧ್ಯಕ್ಷತೆಯಲ್ಲಿ ಮೇ ಮೂರರಂದು ದಾವಣಗೆರೆಯ
$\frac{1}{4}$ ಶಾವುನೂರು ಶಿವಶಂಕರಪ್ಪ ಕಲ್ಯಾ/ಣ
ಮಂಟಪದಲ್ಲಿ ಬೆಳಿಗ್ಗೆ ಹತ್ತು ಗಂಟೆಗೆ ಏರ್ಪಾಡು.
ಕಾರ್ಯಕ್ರಮ : ಪ್ರಾರ್ಥನೆ, ಸ್ವಾಗತ, ಹಿಂದಿನ
ವರ್ಷದ ಸಭೆಯ ನಡವಳಿ ಸ್ಥಿರೀಕರಣ, ಆಡಳಿತ
ಮಂಡಳಿಯ ಜಮಾ ಖರ್ಚು, ಆಸ್ತಿ ಜವಾಬ್ದಾರಿ
$\frac{1}{2}$ ತಃಖ್ತೆ/ ಪರಿಶೀಲನೆ, ಲೆಕ್ಕ ಪರಿಶೋಧಕರ ವರದಿ
ಮಂಡನೆ ಹಾಗೂ ಅಂಗೀಕಾರ ಅಧ್ಯಕ್ಷ ಭಾಷಣ,
ವಂದನಾರ್ಪಣೆ, ಮಹಾಲಕ್ಷ್ಮಿ ಮ್ಯುಸಿಕಲ್ಸ್
ಇವರಿಂದ ಮನರಂಜನೆ, ರಾಷ್ಟ್ರಗೀತೆ, ಲಘು
ಉಪಹಾರ.

$\frac{3}{4}$ **ಕಾರ್ಯ/ದರ್ಶಿಗಳ ಸಹಿಗೆ ಸಭೆಯ ತಿಳುವಳಿಕೆ**
**ಪತ್ರವನ್ನು ತಯಾರಿಸಿ.** ( ಅಂಕಗಳು : 20 )

**ಪ್ರಶ್ನೆ ಮೂರು :** ಜಲ ಸಂಪನ್ಮೂಲ
ಇಲಾಖೆಯಲ್ಲಿನ ನಾಲ್ಕು ನೂರು ಸಹಾಯಕ
ಇಂಜಿನಿಯರ್ ಹುದ್ದೆಗಳಿಗೆ ಆಯ್ಕೆಯಾದ
2 ಅಭ್ಯರ್ಥಿಗXಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು
ಪ್ರಕಟಿಸಿದೆ. ಮೀಸಲಾತಿಯಡಿಯಲ್ಲಿ ಆಯ್ಕೆಯಾದ
ಅಭ್ಯರ್ಥಿಗಳ ಅವರವರ ಮೀಸಲಾತಿ ಪ್ರಮಾಣ
ಪತ್ರವನ್ನು ದಿನಾಂಕ ಮೂರನೇ ಮೇ ಎರಡು ಸಾವಿರದ
$\frac{1}{4}$ ಹತ್ತು/ರಂದು ಕಳುಹಿಸಿ, ಅವರ ಸಿಂಧುತ್ವ ಅಥವಾ
ಅಸಿಂಧುತ್ವ ಪ್ರಮಾಣ ಪತ್ರವನ್ನು ಕಳುಹಿಸಬೇಕೆಂದು
ಕರ್ನಾಟಕ ಲೋಕಸೇವಾ ಆಯೋಗದ
ಕಾರ್ಯದರ್ಶಿಗಳು ಮುಖ್ಯ ಇಂಜಿನಿಯರ್,
ಶಿವಮೊಗ್ಗ ಇವರನ್ನು/ ಕೋರಿ ಪತ್ರ ಬರೆದಿದ್ದರು. $\frac{1}{2}$
ಇದುವರೆಗೂ ಈ ಬಗ್ಗೆ ಮಾಹಿತಿ ಬಾರದೇ
ಇರುವುದರಿಂದ ಅಂತಿಮ ಆಯ್ಕೆಪಟ್ಟಿಯನ್ನು
ಪ್ರಕಟಿಸಲು ಅನಾನುಕೂಲವಾಗಿದೆ. ಆದ್ದರಿಂದ
ವೈಯಕ್ತಿಕ ಆಸಕ್ತಿವಹಿಸಿ, / ಮೀಸಲಾತಿಯಡಿಯಲ್ಲಿ $\frac{3}{4}$
ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಅಥವಾ
ಅಸಿಂಧುತ್ವ ಪ್ರಮಾಣ ಪತ್ರಗಳನ್ನು ಈ ಕೂಡಲೇ
ಕಳುಹಿಸಬೇಕೆಂದು ಕೋರಿ ಕರ್ನಾಟಕ ಲೋಕ ಸೇವಾ
ಆಯೋಗದ ಕಾರ್ಯದರ್ಶಿಗXಳು ಮುಖ್ಯ 3
ಇಂಜಿನಿಯರ್, ಶಿವಮೊಗ್ಗ ಇವರನ್ನು ವಿನಂತಿಸಿದಂತೆ
**ಅರೆ ಸರ್ಕಾರಿ ಪತ್ರ ತಯಾರಿಸಿ.**

( ಅಂಕಗಳು : 20 )

**ಪ್ರಶ್ನೆ ನಾಲ್ಕು :** ಕಾರ್ಯಪಾಲಕ ಇಂಜಿನಿಯರ್,
ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ. 4
ಭ/ದ್ರಾ ನಾಲಾ ವಿಭಾಗ, ಭದ್ರಾವತಿ ಇವರ $\frac{1}{4}$
ಕಚೇರಿಯ ಕಾರು, ಜೀಪು ಮತ್ತು ಲಾರಿಗಳ ಹಳೆಯ
ಟೈರು, ಟ್ಯೂಬು ಮತ್ತು ಬಿಡಿ ಭಾಗಗಳು ಯಾವ

ಸ್ಥಿತಿಯಲ್ಲಿದೆಯೋ ಹಾಗೆ ಬಹಿರಂಗ ಹರಾಜು
$\frac{1}{2}$ ಮಾಡಲಾಗುವುದು/ ಅರ್ಜಿಗಳನ್ನು ಕಚೇರಿ
ವೇಳೆಯಲ್ಲಿ ಪಡೆಯಬಹುದು. ಹರಾಜು ದಿನಾಂಕ
ಎರಡನೇ ಮೇ ಎರಡು ಸಾವಿರದ ಹನ್ನೆರಡು.
ವಿಲೇವಾರಿಯಾಗುವ ಸರಂಜಾಮುಗಳನ್ನು
$\frac{3}{4}$ ಕಚೇರಿಯು ವೇಳೆಯಲ್ಲಿ ಪರಿಶೀ/ಲಿಸುವುದು.
ಜಯಶೀಲರಾದ ಹರಾಜುದಾರರು ಲಿಖಿತ
ಅನುಮೋದನೆ ಬಂದ ಏಳು ದಿನಗಳೊಳಗೆ
ಹಣವನ್ನು ತೆರಿಗೆ ಸಹಿತ ಪಾವತಿ ಮಾಡಿ
ಸರಂಜಾಮುಗಳನ್ನು ಸ್ವಂತ ಖರ್ಚಿನಲ್ಲಿ
4 ಸಾಗಿಸುವುದು. ತಪ್ಪಿXದಲ್ಲಿ ಠೇವಣಿ ಹಣವನ್ನು
ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಇತರರ
ಮುಂಗಡ ಠೇವಣಿ ಹಣವನ್ನು
ಹಿಂದಿರುಗಿಸಲಾಗುವುದು.

**ಹರಾಜು ಪ್ರಕಟಣೆ ಸಿದ್ಧಪಡಿಸಿ.**

( ಅಂಕಗಳು : 20 )

**ಪ್ರಶ್ನೆ ಐದು :** ಶಿವಮೊಗ್ಗ ನ/ಗರಸಭೆಯಿಂದ $\frac{1}{4}$
ಈ ಬಾರಿಯ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವು
ಒಂದು ತಿಂಗಳು ನಗರದ ಕುವೆಂಪು
ರಂಗಮಂದಿರದಲ್ಲಿ ನಡೆಯಲಿದೆ. ವೈಮನಸ್ಸು
ಮರೆತು ಒಟ್ಟಾಗಿ ಈ ದಿನಾಚರಣೆಯನ್ನು
ಆ/ಚರಿಸುವುದು ಎಲ್ಲರ ಕರ್ತವ್ಯವೆಂದು ನಾವೆಲ್ಲ $\frac{1}{2}$
ಪಣ ತೊಡಬೇಕು. ಪ್ರತಿ ವರ್ಷವೂ ರಾಜ್ಯಾದ್ಯಂತ
ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ
ಆಚರಿಸುತ್ತಿದ್ದೇವೆ. ಅದೇ ರೀತಿ ಶಿವಮೊಗ್ಗದ
ಕಾರ್ಯಕ್ರ/ಮವು ಯಶಸ್ವಿಯಾಗಿ ನಡೆಯಲೆಂದು $\frac{3}{4}$
ಹಾರೈಸಿ ದಿನಾಂಕ ಐದನೇ ಮೇ ಎರಡು ಸಾವಿರದ
ಹನ್ನೆರಡರಂದು **ಮಾನ್ಯ ಮುಖ್ಯ ಮಂತ್ರಿಗಳಿಂದ**
**ನಗರಸಭಾ ಅಧ್ಯಕ್ಷರಿಗೆ ಶುಭ ಸಂದೇಶವನ್ನು**
**ತಯಾರಿಸಿ.**X ( ಅಂಕಗಳು : 20 ) 5